## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ.ಸ.ಕಾ.ನಿ.ಅ./ಕೋ.ಉ.ವಿ/ಪಿ.ಆರ್/11/2022-23

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ,
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು. ದಿನಾಂಕ: 14-10-2022

**-: ಸಭೆ ತಿಳುವಳಿಕೆ ಪತ್ರ :-**

**ವಿಷಯ :-** ಆಡುಗೋಡಿ ವಾರ್ಡ್ ಸಂಖ್ಯೆ.147ರ ವಾರ್ಡ್ ಮಟ್ಟದ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

**ಉಲ್ಲೇಖ:-** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶದ ರೀತ್ಯಾ ವಾರ್ಡ್ ಸಂಖ್ಯೆ.147(ಆಡುಗೋಡಿ) ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ **ದಿನಾಂಕ:20.10.2022** ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸಭೆಯು **ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಆಡುಗೋಡಿ, ಹೊಸೂರು ರಸ್ತೆ (ಕಾರ್ಯಪಾಲಕ ಅಭಿಯಂತರರ ಕಛೇರಿ)** ಇಲ್ಲಿ ಜರುಗಲಿದ್ದು, ಸದರಿ ಸಭೆಗೆ ವಾರ್ಡ್ ಸಮಿತಿ ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಲು ಕೋರಿದೆ ಹಾಗೂ ಸಭೆಗೆ ಗೈರು ಹಾಜರಾಗುವ ಅಧಿಕಾರಿಗಳ ಹೆಸರನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು.

<u>**ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು:**</u> 1) ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ. 2) ಒಂಟಿಮನೆ ನಿರ್ಮಾಣದ ಫಲಾನುಭವಿಗಳ ಆಯ್ಕೆಯ ಬಗ್ಗೆ 3) ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ. 4) ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ. 5) ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ. 6) ಬೀದಿ ದೀಪಗಳ ನಿರ್ವಹಣೆ ಬಗ್ಗೆ. 7) ವಿದ್ಯುತ್ ಸರಬರಾಜು (ಬೆಸ್ಕಾಂ)ಗೆ ಸಂಬಂಧಿಸಿದ ವಿಷಯದ ಬಗ್ಗೆ ಹಾಗೂ ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 147, ಆಡುಗೋಡಿ

ರವರಿಗೆ,
ಸಂಬಂಧಪಟ್ಟ ಸದಸ್ಯರುಗಳು/ಅಧಿಕಾರಿಗಳು
ವಾರ್ಡ್ ವ್ಯಾಪ್ತಿಯ ಬಡಾವಣೆಗಳ ನಿವಾಸಿಗಳಿಗೆ

ಪ್ರತಿಯನ್ನು:-

1. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
3. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಂದಾಯ ಅಧಿಕಾರಿಗಳು, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
8. ಪೊಲೀಸ್ ಇನ್ಸ್‌ಪೆಕ್ಟರ್ (ಸಂಚಾರ), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿ.ಬಿ.ಎಂ.ಪಿ (ದಕ್ಷಿಣ), [illegible] ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.

Scanned by CamScanner

ಸಲ್ಲಿಸಿದೆ.





Scanned by CamScanner

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147**

**ದಿನಾಂಕ:20-10-2022 ರಂದು ಅಕ್ಟೋಬರ್-2022 ರ ಮಾಹೆಯ**

**ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಫಾಜಲ್ ಅಹಮ್ಮದ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ. (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ:20.10.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಎಂ. ಗೋಪಾಲ್
2. ಶ್ರೀ ಬಿ.ಡಿ. ನಾಗರಾಜ್
3. ಶ್ರೀ ಪೋರಪಾಂಡಿಯನ್
4. ಶ್ರೀ ಕೆಂಪರಾಜು
5. ಶ್ರೀ ಪ್ರವೀಣ್
6. ಶ್ರೀ ನಾಗರಾಜು

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ ಕಲ್ಪನಾ .ವಿ, ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
2. ಶ್ರೀ ದುರ್ಗಾ ಪ್ರಸಾದ್, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ
3. ಶ್ರೀ ಆರ್. ನಾಗೇಶ್, ಪಿ.ಎಸ್.ಐ.
4. ಶ್ರೀ ಶಿವಕುಮಾರ್ .ಕೆ, ಕಿರಿಯ ಅಭಿಯಂತರರು
5. ಶ್ರೀ ಗಜಾನನ ಅಕ್ಕಿಮರಡಿ, ಕಿರಿಯ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)

* * * * *

ಶ್ರೀ ಫಾಜಲ್ ಅಹಮ್ಮದ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ ಹಾಗೂ ವಾರ್ಡ್‌ನ ಅಧಿಕಾರಿಗಳಿಗೆ ಸಭೆಗೆ ಸ್ವಾಗತಿಸಿ, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಮತ್ತು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ಸೂಚಿಸಿದರು.

ಶ್ರೀ ಗೋಪಾಲ್ ರವರು ಮಾತನಾಡಿ, ಆಡುಗೋಡಿ ವ್ಯಾಪ್ತಿಯಲ್ಲಿ ಬ್ಲಾಕ್‌ಸ್ಪಾಟ್‌ಗಳು ನಿರ್ಮಾಣವಾಗಲು ಮುಖ್ಯ ಕಾರಣ ಕಸ ಸಂಗ್ರಹಿಸುವವರು ಬೆಳಗ್ಗೆ 10.00 ಗಂಟೆಯ ಒಳಗಾಗಿ ಬರದೆ ಬೆಳಗ್ಗೆ 10.00 ರ ನಂತರ ಕಸ ಸಂಗ್ರಹಿಸಲು ಬರುತ್ತಿರುವುದರಿಂದ ಕೆಲಸಕ್ಕೆ ಹೋಗುವವರು ರಾತ್ರಿಯ ವೇಳೆಗಳಲ್ಲಿ ರಸ್ತೆಗಳಲ್ಲಿ ಕಸ ಎಸೆಯುತ್ತಿರುವುದರಿಂದ ಬ್ಲಾಕ್ ಸ್ಪಾಟ್‌ಗಳು ನಿರ್ಮಾಣವಾಗುತ್ತಿರುತ್ತವೆ. ಆದುದರಿಂದ ಬೆಳಗ್ಗೆ 8.00 ಗಂಟೆಯ ಒಳಗೆ ಕಸ ಸಂಗ್ರಹಣೆ ಕಾರ್ಯವನ್ನು ಕೈಗೊಳ್ಳುವಂತೆ ಸಭೆಗೆ ತಿಳಿಸಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಮ್ಯಾನ್‌ಹೋಲ್‌ಗಳಲ್ಲಿ ಇರುವ ಹೂಳುಗಳನ್ನು ತೆಗೆದು, ಅವುಗಳನ್ನು ತೆರವುಗೊಳಿಸದೆ ರಸ್ತೆಯ ಮೇಲೆ ಹಾಗೆಯೇ ಬಿಟ್ಟಿರುತ್ತಾರೆ. ಆದುದರಿಂದ ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ಕೈಗೊಳ್ಳಬೇಕು ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ಹೂಳುಗಳನ್ನು ತೆರವುಗೊಳಿಸಲು ಇರುವಂತಹ ವಾಹನದೊಂದಿಗೆ ಹೆಚ್ಚುವರಿಯಾಗಿ ಮತ್ತೊಂದು ವಾಹವನ್ನು ನೇಮಿಸಬೇಕೆಂದು ಸಭೆಯಲ್ಲಿ ತಿಳಿಸಿದರು.



Scanned by CamScanner

ಶ್ರೀ ಪಾಂಡಿಯನ್ ರವರು ಮಾತನಾಡಿ, ರಾಜೇಂದ್ರನಗರದಲ್ಲಿನ 7ನೇ ಮುಖ್ಯರಸ್ತೆ-(2), 9ನೇ ಅಡ್ಡರಸ್ತೆ-(2), 6ನೇ ಅಡ್ಡರಸ್ತೆ (2), 13ನೇ ಅಡ್ಡರಸ್ತೆ-(2) ರಲ್ಲಿ ಒಟ್ಟು 6 ವಿದ್ಯುತ್ ಕಂಬಗಳು ಬಾಗಿರುತ್ತವೆ ಹಾಗೂ ವಿದ್ಯುತ್ ಕಂಬಗಳು ರಸ್ತೆ ಚರಂಡಿಯ ಮಧ್ಯದಲ್ಲಿ ಇರುತ್ತದೆ. ಆದುದರಿಂದ ಸಂಬಂಧಪಟ್ಟ ಇಲಾಖೆಯವರು ಸದರಿ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮವಹಿಸುವಂತೆ ಸಭೆಗೆ ತಿಳಿಸಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ರಾಜೇಂದ್ರನಗರ ವ್ಯಾಪ್ತಿಯಲ್ಲಿ ಕೆಲವು ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಿದ್ದು, ಆರ್.ಆರ್. ನಂಬರನ್ನು ಗ್ರಾಹಕರಿಗೆ ನೀಡಿರುವುದಿಲ್ಲ. ಇದರಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾಗುವುದರಿಂದ ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, 7ನೇ ಬ್ಲಾಕ್ ಕೋರಮಂಗಲ, ವೊಡಾಫೋನ್ ಕಛೇರಿಯ ಎಡ ಭಾಗದಲ್ಲಿರುವ ಪಾದಚಾರಿ ಮಾರ್ಗದಲ್ಲಿ ಗ್ಯಾರೇಜ್ ಮಾಲೀಕರು ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಪಾದಚಾರಿ ಮಾರ್ಗದಲ್ಲಿ ವಾಹನಗಳನ್ನು ನಿಲ್ಲಿಸದಂತೆ ಗ್ಯಾರೇಜ್ ಮಾಲೀಕರಿಗೆ ಸೂಚನೆ ನೀಡಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, ಫೋರಂ ಮಾಲ್ ಸಿಗ್ನಲ್ ನಿಂದ ಮಂಗಳ ಕಲ್ಯಾಣ ಮಂಟಪದವರೆಗೆ ಇರುವ ಬೀದಿದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಆದುದರಿಂದ ಹದಗೆಟ್ಟಿರುವ ರಸ್ತೆ ದೀಪಗಳನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, ಕೋರಮಂಗಲ 7ನೇ ಬ್ಲಾಕ್‌ನಲ್ಲಿನ ಸಂಗೀತಾ ಮೊಬೈಲ್ ಅಂಗಡಿಯ ಹತ್ತಿರವಿರುವ ಸಿಗ್ನಲ್‌ನಲ್ಲಿ ಅಳವಡಿಸಿರುವ ಪೊಲೀಸ್ ಚೌಕಿ ಹಳೆಯದಾಗಿದ್ದು, ಪ್ರಾಯೋಜನಕ್ಕೆ ಬಾರದ ಸ್ಥಿತಿಯಲ್ಲಿರುವುದರಿಂದ ಅದನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ಮಂಗಳ ಕಲ್ಯಾಣ ಮಂಟಪದ ರಸ್ತೆಯಲ್ಲಿರುವ ಎಸ್.ಆರ್.ಎಸ್. ಬಿಲ್ಡಿಂಗ್ ರವರು ರಸ್ತೆಯ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಇತರೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ಬಿ.ಡಿ. ನಾಗರಾಜು ಮತ್ತು ಕೆಂಪರಾಜು ರವರು ಮಾತನಾಡಿ, ಮಂಗಳ ಕಲ್ಯಾಣ ಮಂಟಪದ ರಸ್ತೆಯಲ್ಲಿರುವ ಎಸ್.ಆರ್.ಎಸ್. ಬಿಲ್ಡಿಂಗ್ ರವರು ಪಾದಚಾರಿ ಮಾರ್ಗದಲ್ಲಿ ಗಾರ್ಡನ್ ನಿರ್ಮಿಸಿರುತ್ತಾರೆ. ಇದರಿಂದ ಸಾರ್ವಜನಿಕರು ಪಾದಚಾರಿ ಮಾರ್ಗದಲ್ಲಿ ಸಂಚರಿಸಲು ತುಂಬಾ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಪಾದಚಾರಿ ಮಾರ್ಗದಲ್ಲಿ ನಿರ್ಮಿಸಿರುವ ಗಾರ್ಡನ್ ಅನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್ .ಪಿ)
ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್-147 ಆಡುಗೋಡಿ ವಿಭಾಗ

20/10/22
(ಶ್ರೀ ಫಾಜಲ್ ಅಹಮ್ಮದ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-147, ಆಡುಗೋಡಿ



Scanned by CamScanner